ರಾಜ್ಯದಲ್ಲಿ ಹಾಲು ಉತ್ಪಾದನೆ

1211(1232) ಶ್ರೀ ಆಗ ಜ್ಞಾನೇಂದ್ರ (ತೀರ್ಥಹಳ್ಳಿ) :— ಪಶು ಸಂಗೋಪನೆ ಮತ್ತು ಸಕ್ಕರೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಪ್ರತಿದಿನ ಉತ್ಪಾದನೆಯಾಗುತ್ತಿರುವ ಹಾಲಿನ ಪ್ರಮಾಣ ಎಷ್ಟು? ಜಿಲ್ಲಾವಾರು ಮಾಹಿತಿ ನೀಡುವುದು.

ಆ) ರಾಜ್ಯಕ್ಕೆ ಪ್ರತಿನಿತ್ಯ ಅವಶ್ಯವಿರುವ ಹಾಲಿನ ಪ್ರಮಾಣ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

ಇ) ರಾಜ್ಯಕ್ಕೆ ಪ್ರತಿನಿತ್ಯ ಯಾವ ಯಾವ ರಾಜ್ಯಗಳಿಂದ ಎಷ್ಟು ಲೀಟರ್ ಹಾಲು ಬರುತ್ತಿದೆ?

ಈ) ರಾಜ್ಯದಲ್ಲಿ ಹಾಲಿನ ಪ್ರಮಾಣ ಹೆಚ್ಚಾಗುತ್ತಿರುವ ಹಿನ್ನಲೆಯಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎ. ಕೃಷ್ಣಪ್ಪ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು) :—

ಅ) 1999-2000 ರ ರಾಜ್ಯ ಮಾದರಿ ಸಮೀಕ್ಷೆ ಪ್ರಕಾರ ರಾಜ್ಯದಲ್ಲಿ ಪ್ರತಿನಿತ್ಯ 124.80 ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಐಎಸಿಆರ್ ಶಿಫಾರಸ್ಸಿನಂತೆ ರಾಜ್ಯಕ್ಕೆ ಪ್ರತಿನಿತ್ಯ 123.13 ಲಕ್ಷ ಲೀಟರ್ ಹಾಲು ಅಗತ್ಯವಿದೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ನಿಖರ ಮಾಹಿತಿ ಲಭ್ಯವಿರುವುದಿಲ್ಲ. ಕರ್ನಾಟಕ ಹಾಲು ಮಹಾ ಮಂಡಳಿಯು ಮಾಡಿರುವ ಅಂದಾಜುಗಳ ಪ್ರಕಾರ ಪರಿಮಾಣ ಈ ಕೆಳಕಾಣಿಸಿದಂತೆ ಇರುತ್ತದೆ.

ಆಂಧ್ರ ಪ್ರದೇಶದಿಂದ	126,000	ಲೀಟರ್‌ಗಳು
ತಮಿಳುನಾಡಿನಿಂದ	103,000	ಲೀಟರ್‌ಗಳು
ಮಹಾರಾಷ್ಟ್ರದಿಂದ	151,000	ಲೀಟರ್‌ಗಳು

ಈ) ಇಡೀ ರಾಷ್ಟ್ರದಲ್ಲಿ ಹಾಲಿನ ಉತ್ಪಾದನೆ ಹೆಚ್ಚಾಗುತ್ತಿದ್ದು ರಾಜ್ಯದಲ್ಲಿ ಹಾಲಿನ ಪ್ರಮಾಣ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ವೈಜ್ಞಾನಿಕವಾಗಿ ಹಾಲಿನ ಮಾರಾಟವನ್ನು ಹೆಚ್ಚಿಸಲು ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

1) ನಗರ ಪ್ರದೇಶದಲ್ಲಿ ದಿನವಿಡೀ ಗ್ರಾಹಕರಿಗೆ ಹಾಲು ಸಿಗುವಂತೆ ಮಾಡಲು 'ಡೇ ಕೌಂಟರ್'ಗಳನ್ನು ಸ್ಥಾಪಿಸುವುದು.

2) ಹಾಲು ವಿತರಕರಿಗೆ ಕಮೀಷನ್ ಹೆಚ್ಚಿಸಲಾಗಿದೆ.

3) ಹೆಚ್ಚಿನ ಪ್ರಚಾರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

4) ಗ್ರಾಹಕರನ್ನು ಡೇರಿಗೆ ಕರೆತಂದು ಹಾಲು ಸಂಸ್ಕರಣೆ ಮತ್ತು ಇತರ ಚಟುವಟಿಕೆಗಳನ್ನು ಪರಿಚಯಿಸುವುದು.

5) ಹಾಲು ವಿತರಕರಿಗೆ ಪ್ರೋತ್ಸಾಹಕ ಸೌಲಭ್ಯಗಳನ್ನು ಕಲ್ಪಿಸುವುದು.

6) ಹಾಲಿನ ಗುಣಮಟ್ಟವನ್ನು ಕಾಪಾಡಲು ಮತ್ತು ಹೆಚ್ಚಿಸಲು ಎಲ್ಲಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

6) ಮಾರಾಟವಾಗದೆ ಉಳಿಯುವ ಹೆಚ್ಚುವರಿಯಾದ ಹಾಲನ್ನು ಮಾರಾಟ ಮಾಡಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ. ಮುಖ್ಯವಾಗಿ ಪಾರಕ್ಕೊಮ್ಮೆ 45,000 ಲೀಟರ್ ಹಾಲನ್ನು ಮಾತ್ರ ಡೇರಿ ಕಲ್ಕತ್ತಾಗೆ ಮಾರಾಟ ಮಾಡಲಾಗುತ್ತಿದೆ. ಪ್ರತಿದಿನ 30,000 ಲೀಟರ್ ಹಾಲನ್ನು ಗೋವಾ ರಾಜ್ಯಕ್ಕೆ ಮಾರಾಟ ಮಾಡಲಾಗುತ್ತಿದೆ.

ನಮ್ಮ ರಾಜ್ಯದ ಮತ್ತು ನೆರೆ ರಾಜ್ಯಗಳಲ್ಲಿ ಲಭ್ಯವಿರುವ ಹಾಲು ಪರಿವರ್ತನಾ ಘಟಕಗಳ ಸಾಮರ್ಥ್ಯವನ್ನು ಬಳಸಿಕೊಂಡು ಸುಮಾರು 2.50 ರಿಂದ 3.00 ಲಕ್ಷ ಲೀಟರ್ ಹಾಲನ್ನು ಪುಡಿಯಾಗಿ ಪರಿವರ್ತಿಸಲಾಗುತ್ತಿದೆ. ಅಲ್ಲದೆ ಖಾಸಗಿ ಸಂಸ್ಥೆಗಳಿಗೂ ಸಹ 2.00 ರಿಂದ 2.50 ಲಕ್ಷ ಲೀಟರ್ ಹಾಲನ್ನು ಮಾರಾಟ ಮಾಡಲಾಗುತ್ತಿದೆ. ರಾಜ್ಯದಲ್ಲಿ ಹಾಲಿನ ಪ್ರಮಾಣ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಯಲಹಂಕದ ಬಳಿ ಇರುವ ಮಾತೃ ಡೇರಿಯಲ್ಲಿ ನೂತನವಾಗಿ ಪ್ರತಿನಿತ್ಯ 3.00 ಲಕ್ಷ ಲೀಟರ್ ಹಾಲನ್ನು ಪರಿವರ್ತಿಸುವ ಘಟಕವನ್ನು ರೂ.22.00 ಕೋಟಿ ಬಂಡವಾಳ ಹೂಡಿ ಸ್ಥಾಪಿಸಲು ಕ್ರಮ ಕೈಗೊಂಡಿದ್ದು ಈ ವರ್ಷದ ಅಂತ್ಯದ ವೇಳೆಗೆ ಕಾರ್ಯಾರಂಭ ಮಾಡುವ ನಿರೀಕ್ಷೆ ಇದೆ. ಇದ್ದಲ್ಲದೆ ಮಾತೃ ಡೇರಿಯಲ್ಲಿರುವ ಐಸ್ ಕ್ರೀಂ ಘಟಕದ ಸಾಮರ್ಥ್ಯವನ್ನು ಮೂರು ಸಾವಿರ ಲೀಟರ್‌ನಿಂದ ಹತ್ತು ಸಾವಿರ ಲೀಟರ್‌ಗೆ ಹೆಚ್ಚಿಸಲಾಗುತ್ತಿದೆ. ಮುಂದಿನ ನಾಲ್ಕು ವರ್ಷಗಳಲ್ಲಿ ಕರ್ನಾಟಕ ಕಾವೇರಿ ಮಹಾ ಮಂಡಳಿಯ ವ್ಯಾಪ್ತಿಯಲ್ಲಿರುವ ಎಲ್ಲಾ ಒಕ್ಕೂಟಗಳಲ್ಲಿರುವ ಡೇರಿಗಳ ಸಂಸ್ಕರಣಾ ಸಾಮರ್ಥ್ಯವನ್ನು 23.2 ಲಕ್ಷ ಲೀಟರ್‌ಗಳಿಂದ

27.00 ಲಕ್ಷ ಲೀಟರ್‌ಗಳಿಗೆ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಇತ್ತೀಚೆಗೆ ಬೆಂಗಳೂರು ಡೈರಿಯಲ್ಲಿ ನೂತನವಾಗಿ ಪ್ರತಿದಿನ 6.00 ಲಕ್ಷ ಲೀಟರ್ ಹಾಲನ್ನು ಸಂಸ್ಕರಿಸುವ ಸಾಮರ್ಥ್ಯವುಳ್ಳ ಮೇಗಾ ಡೇರಿಯನ್ನು ಕಾರ್ಯಾರಂಭ ಮಾಡಲಾಗಿದೆ. ಮಾರಾಟವಾಗದೇ ಉಳಿಯುವ ಹೆಚ್ಚಿನ ಹಾಲನ್ನು ಹಾಲಿನ ಪುಡಿ ಮತ್ತು ಬೆಣ್ಣೆಯನ್ನಾಗಿ ಪರಿವರ್ತಿಸಲಾಗುತ್ತಿದ್ದು ಇವುಗಳನ್ನು ಮಾರಾಟ ಮಾಡುವ ಸಲುವಾಗಿ ಸತತವಾಗಿ ಮಾತೃ ಡೇರಿ ನವದೆಹಲಿ, ಡೆಲ್ಲಿ ಮಿಲ್ಕ್ ಸ್ಕೀಂ. ಕೊಲ್ಕತ್ತಾದಲ್ಲಿರುವ ಮಾತೃ ಡೇರಿ, ಮೆಟ್ರೋ ಡೇರಿ ಮತ್ತು ಇನ್ನಿತರೆ ರಾಜ್ಯಗಳ ಮಹಾ ಮಂಡಳಿಗಳ ಜೊತೆ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ 1202ಕ್ಕೆ ಅನುಬಂಧ

ಕ್ರಮ ಸಂಖ್ಯೆ	ಜಿಲ್ಲೆಗಳ ಹೆಸರು	ಪ್ರತಿನಿತ್ಯ ಉತ್ಪಾದನೆಯಾಗುತ್ತಿರುವ ಹಾಲಿನ ಪ್ರಮಾಣ (ಲಕ್ಷ ಲೀಟರ್‌ಗಳಲ್ಲಿ)	ಪ್ರತಿನಿತ್ಯ ಆಗತ್ಯವಿರುವ ಹಾಲಿನ ಪ್ರಮಾಣ ಐಎಂಆರ್‌ನವರ ಪ್ರಕಾರ (ಲಕ್ಷ ಲೀಟರ್‌ಗಳಲ್ಲಿ)
1)	ಬೆಂಗಳೂರು ನಗರ	2.96	15.65
2)	ಬೆಂಗಳೂರು ಗ್ರಾಮಾಂತರ	10.86	4.00
3)	ಬೆಳಗಾಂ	12.88	10.10
4)	ಬಳ್ಳಾರಿ	6.85	4.86
5)	ಬೀದರ್	2.16	3.60
6)	ಬಿಜಾಪುರ	2.93	4.34
7)	ಚಿಕ್ಕಮಗಳೂರು	2.33	2.73
8)	ಚಿತ್ರದುರ್ಗ	3.18	3.62
9)	ದಕ್ಷಿಣಕನ್ನಡ	1.78	4.55
10)	ಧಾರವಾಡ	4.00	3.85
11)	ಗುಲ್ಬರ್ಗಾ	6.55	7.50
12)	ಹಾಸನ	6.14	4.13
13)	ಕೊಡಗು	0.77	1.31
14)	ಕೋಲಾರ	8.96	6.06
15)	ಮಂಡ್ಯ	4.74	4.23
16)	ಮೈಸೂರು	4.85	6.30
17)	ರಾಯಚೂರು	5.51	3.25
18)	ಶಿವಮೊಗ್ಗ	4.79	3.94
19)	ತುಮಕೂರು	6.44	6.19

1	2	3	4
20)	ಉತ್ತರ ಕನ್ನಡ	1.84	3.55
21)	ಬಾಗಲಕೋಟೆ	5.34	3.96
22)	ಚಾಮರಾಜನಗರ	1.97	2.31
23)	ದಾವಣಗೆರೆ	4.03	4.30
24)	ಗದಗ	2.47	2.33
25)	ಹಾವೇರಿ	4.68	3.45
26)	ಕೊಪ್ಪಳ	2.49	2.36
27)	ಉಡುಪಿ	3.48	2.66
	ಒಟ್ಟು	124.80	126.13

ಸಕ್ಕರೆ ಕಾರ್ಖಾನೆಗಳು ರೈತರಿಗೆ ನೀಡಬೇಕಾದ ಹಣದ ಪಾವತಿ.

1212(1196) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) :— ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮಂಡ್ಯ ಜಿಲ್ಲೆಯಲ್ಲಿರುವ ಸಕ್ಕರೆ ಕಾರ್ಖಾನೆಗಳಲ್ಲಿ ಈ ವರ್ಷ ಅರೆದಿರುವ ಕಬ್ಬಿನ ಪ್ರಮಾಣವೆಷ್ಟು? (ಪ್ರತ್ಯೇಕ ವಿವರಗಳನ್ನು ನೀಡುವುದು)

ಆ) ಕಬ್ಬಿನ ಸರಬರಾಜು ಬಾಬ್ತು ರೈತರಿಗೆ ನೀಡಲಾಗಿರುವ ಹಣವೆಷ್ಟು? (ವಿವರಗಳನ್ನು ಪ್ರತ್ಯೇಕವಾಗಿ ನೀಡುವುದು)

ಇ) ರೈತರಿಗೆ ಬಾಕಿ ನೀಡಬೇಕಾದಲ್ಲಿ, ನೀಡಬೇಕಾದ ಹಣದ ಮೊತ್ತವೆಷ್ಟು? (ಪ್ರತ್ಯೇಕ ವಿವರಗಳನ್ನು ನೀಡುವುದು)

ಈ) ರೈತರಿಗೆ ಯಾವಾಗ ಬಾಕಿ ಹಣ ನೀಡಲಾಗುವುದು?

ಶ್ರೀ ಎ. ಕೃಷ್ಣಪ್ಪ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು) :—

ಅ) ಮಂಡ್ಯ ಜಿಲ್ಲೆಯಲ್ಲಿ 4 ಸಕ್ಕರೆ ಕಾರ್ಖಾನೆಗಳು ಕಾರ್ಯನಿರ್ವಹಿಸುತ್ತಿದ್ದು, ಅವುಗಳಲ್ಲಿ ಒಂದು ಸರ್ಕಾರಿ ವಲಯದಲ್ಲೂ, ಒಂದು ಸಹಕಾರಿ ವಲಯದಲ್ಲೂ ಉಳಿದವುಗಳು ಖಾಸಗಿ ವಲಯದಲ್ಲಿರುತ್ತವೆ.